**ಸದಸ್ಯರ ಹೆಸರು ಶ್ರೀ ಎನ್ ಸಂಪಂಗಿ(ಬಾಗೇಪಲ್ಲಿ)**

**ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಯವರು)**

## ಪ್ರಶ್ನೆ

1 ಬಾಗೇವಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿ ನೀರಿನ ವ್ಯವಸ್ಥೆ ಸರಿಯಿಲ್ಲದಿರುವ ಬಗ್ಗೆ ಹಾಗೂ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿರುವುದರಿಂದ ಫ್ಲೋರೋಸಿನ್ ಕಾಯಿಲೆ ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2 ಹಾಗಿದ್ದಲ್ಲಿ ಫ್ಲೋರೈಡ್ ರಹಿತ ಕುಡಿಯುವ ನೀರಿನ ಸರಬರಾಜಿಗೆ ಕೈಗೊಂಡಿರುವ ಕ್ರಮಗಳೇನು?

## ಉತ್ತರ

1 ಬಂದಿದೆ

2 ಬಾಗೇವಲ್ಲಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ರೂ 159 00 ಲಕ್ಷಗಳ ಒಳ ಉವಾಂಗಣಗಳ ಅಂದಾಜಿಗೆ ಸರ್ಕಾರದಿಂದ ಅನುಮೋದನೆ ನೀಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ ಪಟ್ಟಣಗಳ ನಾಗರೀಕರಿಗ ಫ್ಲೋರೈಡ್ ರಹಿತ ಶುದ್ಧ ನೀರನ್ನು ಸರಬರಾಜು ಮಾಡಲು ಪರಗೋಡು ಹತ್ತಿರ ಚಿತ್ರಾವತಿ ನದಿಗೆ ಅಡ್ಡಲಾಗಿ ಹೊಸಕೆರೆಯನ್ನು ನಿರ್ಮಿಸುವ ಕಾಮಗಾರಿಯನ್ನು ಮಂಡಲಿ ವತಿಯಿಂದ ತೆಗದುಕೊಳ್ಳಲು ಇತ್ತೀಚೆಗೆ ಅನುಮೋದನೆ ನೀಡಿದೆ ಈ ಕೆರೆಯಿಂದ ಬಾಗೇವಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳ ಹಾಗೂ ದಾರಿಯ ಮಧ್ಯೆ ಬರುವ ಹಳ್ಳಿಗಳಿಗೂ ಸಹ ಕುಡಿಯುವ ನೀರು ಸರಬರಾಜು ಮಾಡುವ ಸಮಗ್ರ ಯೋಜನೆಗಳನ್ನು ತಯಾರಿಸಲಾಗುತ್ತಿದೆ

ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ಬಸ್ ನಿಲ್ದಾಣ ಮತ್ತು ಟ್ರಕ್ ಟರ್ಮಿನಲ್ ನಿರ್ಮಾಣ

ಬುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 125(519)

**ಸದಸ್ಯರ ಹೆಸರು ಶ್ರೀ ಚೌಡರೆಡ್ಡಿ(ಚಿಂತಾಮಣಿ)**

**ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)**

## ಪ್ರಶ್ನೆ

ಅ) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ಬಸ್ ನಿಲ್ದಾಣ ಹಾಗೂ ವಾಹನ ರಿಪೇರಿ ಅಂಗಡಿಗಳು ಮತ್ತು ಟ್ರಕ್ ಟರ್ಮಿನಲ್ ನಿರ್ಮಿಸಲು ನಗರಸಭೆಯಿಂದ ಸ್ಥಳವನ್ನು ಗುರುತಿಸಿ ಒಂದು ಪ್ರೋಜೆಕ್ಟ್ ರಿಪೋರ್ಟ್ ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದರ ಅಂದಾಜು ಮೊತ್ತವೆಷ್ಟು?

ಆ) ಈ ಪ್ರೋಜೆಕ್ಟ್ ರಿಪೋರ್ಟ್ ಸುಮಾರು 6 ವರ್ಷಗಳ ಹಿಂದೆ ತಯಾರು ಮಾಡಿದ್ದು, ಹುಡ್ಕೋ ನೆರವು ಪಡೆಯುವಲ್ಲಿ ವಿಳಂಬವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಅತಿ ಶೀಘ್ರವಾಗಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

## ಉತ್ತರ

ಅ) ಹೌದು 1994ರಲ್ಲಿ ರೂ 396 00 ಲಕ್ಷದ ಪ್ರಾಜೆಕ್ಟ್ ರಿಪೋರ್ಟ್ ಮಾಡಲಾಗಿದೆ

ಆ) ಹೌದು, ಆದಾಗ್ಯೂ ದಿನಾಂಕ 30-1-99ರಂದು ವಿಷಯ ಸಂಖ್ಯೆ 6ರಲ್ಲಿ ತಂಗುದಾಣ ಹಾಗೂ ಶೌಚಾಲಯ ನಿರ್ಮಿಸಲು ಕೌನ್ಸಿಲ್‌ನಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ

ಇ) ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗುವುದು

ಗುಂಡ್ಲುಪೇಟೆ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 126(608)

**ಸದಸ್ಯರ ಹೆಸರು ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್(ಗುಂಡ್ಲುಪೇಟೆ)**

**ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಯವರು)**

## ಪ್ರಶ್ನೆ

1 ಗುಂಡ್ಲುಪೇಟೆ ಪಟ್ಟಣಕ್ಕೆ ಕರ್ನಾಟಕನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ವತಿಯಿಂದ ಕಬಿನಿ ನದಿಯಿಂದ ಕುಡಿಯುವ ನೀರಿನ ಯೋಜನೆಯ ಮಾರ್ಗ